





# ನಿಪುಣ ಈಜುಗಾರ ಕೆಂಪು ತಲೆ ಬಾತುಕೋಳಿ

ಕೆಂಪು ತಲೆ ಬಾತುಕೋಳಿ (ರೆಡ್ ಕ್ರೆಸ್ಟೆಡ್ ಪೋಚಾರ್ಡ್) ಮೂಲತಃ ದಕ್ಷಿಣ ಯೂರೋಪಿನ ತಗ್ಗು ಪ್ರದೇಶ ಹಾಗೂ ಸರೋವರಗಳಲ್ಲಿ ವಾಸಿಸುವ ನಿಪುಣ ಈಜುಗಾರ ಜಲಪಕ್ಷಿ. ಆದರೆ ಅವು ಚಳಿಗಾಲವನ್ನು ಸಾಮಾನ್ಯವಾಗಿ ಭಾರತೀಯ ಉಪಖಂಡಗಳಲ್ಲಿ ಮತ್ತು ಆಫ್ರಿಕಾದಲ್ಲಿ ಕಳೆಯುತ್ತವೆ. ಕಿತ್ತಳೆ, ಕೆಂಪು ಬಣ್ಣದ ದುಂಡಾದ ತಲೆ, ಕೆಂಪನೆಯ ಕೊಕ್ಕು, ಕಪ್ಪು ಬಣ್ಣದ ಎದೆ, ಪಾರ್ಶ್ವಗಳಲ್ಲಿ ಬಿಳಿ, ಹಿಂಭಾಗದಲ್ಲಿ ಕಂದು, ಕಪ್ಪನೆಯ ಬಾಲ ಹೊಂದಿದ್ದು ವರ್ಣಮಯವಾಗಿ ಕಾಣುತ್ತದೆ. ಸಾಮಾನ್ಯವಾಗಿ ಗುಂಪು ಗುಂಪಾಗಿ ವಾಸಿಸುವ ಇವು ಇತರೆ ಬಾತುಕೋಳಿಗಳ ಜೊತೆಗೂ ಹೊಂದಿಕೊಂಡು ಬೆರೆಯುತ್ತವೆ.

ಬೇರೆ ಜಾತಿಯ ಬಾತುಕೋಳಿಗಳ ಜತೆ ಸಂಯೋಗ ನಡೆಸಿ ವಿಶಿಷ್ಟ ತಳಿಗಳಿಗೂ ಕಾರಣವಾಗಿವೆ. ಸಾಮಾನ್ಯವಾಗಿ ಮಲ್ಲಾರ್ಡ್, ಪಿನ್ ಟೇಲ್ಡ್, ಪೋಚಾರ್ಡ್ ಪಕ್ಷಿ ಸಂಕುಲಗಳೊಂದಿಗೆ ಇವು ಮಿಲನಗೊಳ್ಳುತ್ತವೆ.

ಕೆಂಪು ತಲೆ ಬಾತುಕೋಳಿಗಳು ಸರೋವರದ ಪಕ್ಕದಲ್ಲಿ ಸಸ್ಯವರ್ಗದ ನಡುವೆ ಗೂಡುಗಳನ್ನು ನಿರ್ಮಿಸುತ್ತವೆ. ಸುಮಾರು 8 ರಿಂದ 12 ಮಸುಕಾದ ಹಸಿರು ಮೊಟ್ಟೆಗಳನ್ನು ಇಟ್ಟು ಮರಿ ಮಾಡುತ್ತವೆ. ಜಲಸಸ್ಯಗಳೇ ಇವುಗಳ ಆಹಾರ. ನೀರಿನಲ್ಲಿ ಮುಳುಗುವ ಕಲೆಯನ್ನು ಚೆನ್ನಾಗಿ ಕರಗತ ಮಾಡಿಕೊಂಡಿವೆ. ನೀರಿನಲ್ಲಿ ಮುಳುಗಿ ತನ್ನ ಆಹಾರವನ್ನು ಹುಡುಕಿ ತಿನ್ನುತ್ತವೆ.

ಇವು ನೀರಿನಲ್ಲಿ ಆಟವಾಡುವುದನ್ನು ನೋಡುವುದೇ ಆನಂದದಾಯಕ. ತನ್ನ ರೆಕ್ಕೆಗಳನ್ನು ಬಿಚ್ಚಿ ನೀರಿನ ಮೇಲೆ ಯೋಗಾಸನದ ಮಾದರಿಯಲ್ಲಿ ನಿಲ್ಲುವ, ನಡೆಯುವ, ಈಜುವ, ಹಾರುವ ಕೆಂಪು ತಲೆ ಬಾತುಕೋಳಿಗಳ ಅನೇಕ ಛಾಯಾಚಿತ್ರಗಳನ್ನು ಈಚಿನ 'ಗಾಜಲ್ ಡೋಬಾ' ಪ್ರವಾಸದಲ್ಲಿ ಸಂಗ್ರಹಿಸಿದೆ. ಡಿಸೆಂಬರ್‌ನಿಂದ ಫೆಬ್ರುವರಿ ಅವಧಿಯಲ್ಲಿ ಈ ಪಕ್ಷಿಗಳನ್ನು ಪಶ್ಚಿಮ ಬಂಗಾಳದ ತೀಸ್ತಾ ನದಿಯ ದಡ 'ಗಾಜಲ್ ಡೋಬಾ'ದಲ್ಲಿ ನೋಡಬಹುದು. ■